# ವಿಲಿಯಂ ಜೇಮ್ಸ್ (1842-1910)

## ಇಂದಿರಾ ಜೈಪ್ರಕಾಶ್



***

ವಿಲಿಯಂ ಜೇಮ್ಸ್ ಅಮೆರಿಕೆಯಲ್ಲಿ ಮನೋವಿಜ್ಞಾನವನ್ನು ಸ್ಥಾಪಿಸಿದವನು. ಇವನ 'ಪ್ರಿನ್ಸಿಪಲ್ಸ್ ಆಫ್ ಸೈಕಾಲಜಿ (Principles of Psychology)' ಪ್ರಾಯಶಹ ಮನೋವಿಜ್ಞಾನದ ಪ್ರಥಮ ಪಠ್ಯ ಪುಸ್ತಕ. ಇದು ಈ ಕ್ಷೇತ್ರದ 'ಕ್ಲಾಸಿಕ್' ಮತ್ತು ಅತ್ಯಂತ ಪ್ರಭಾವಶಾಲಿ ಕೃತಿ ಎನಿಸಿದೆ. ಇವನು ಜನಿಸಿದ್ದು ನ್ಯೂಯಾರ್ಕ್ ನಗರದ ಸಿರಿವಂತ ಮತ್ತು ವಿದ್ಯಾವಂತ ಕುಟುಂಬದಲ್ಲಿ. ಇವನ ಸಹೋದರ ಹೆನ್ರಿ ಜೇಮ್ಸ್ ಅಮೆರಿಕೆಯ ಪ್ರಸಿದ್ಧ ಬರಹಗಾರನಾಗಿದ್ದ. ಜೇಮ್ಸ್ ಹಾರ್ವರ್ಡ್ನಲ್ಲಿ ವೈದ್ಯಕೀಯ ಪದವಿ ಪಡೆದು ಶರೀರಶಾಸ್ತ್ರದ ಅಧ್ಯಾಪಕನಾಗಿ ಕೆಲಸಕ್ಕೆ ಸೇರಿದವನು 1872ರಲ್ಲಿ ಮನೋವಿಜ್ಞಾನ ಕಲಿಸಲು ಪ್ರಾರಂಭಿಸಿದ. ಮನೋವಿಜ್ಞಾನದ ಪ್ರಯೋಗಶಾಲೆ ಸ್ಥಾಪಿಸಿ ಮೇರಿ ಕಾಲ್ಕಿನ್ಸ್, ಎಡ್ವರ್ಡ್ ಥಾರ್ನ್ಡೈಕ್, ಸ್ಟೇನ್ಲಿ ಹಾಲ್ ಮುಂತಾದ ಶಿಷ್ಯರುಗಳನ್ನು ಸಿದ್ಧಪಡಿಸಿದ. ಕ್ರಿಯಾತ್ಮಕವಾದ, ಫಲಪ್ರಮಾಣಿತವಾದ ಮತ್ತು ಸಂವೇಗದ ಜೇಮ್ಸ್ - ಲಾಂಗ್ ಸಿದ್ಧಾಂತ ಇವನ ವಿಶಿಷ್ಟ ಕೊಡುಗೆಗಳು.

ಇವನು ಹನ್ನೆರಡು ವರ್ಷಗಳ ಕಾಲ ಶ್ರಮಿಸಿ 1890 ರಲ್ಲಿ ಪ್ರಕಟಿಸಿದ ಸಾವಿರದ ನಾನೂರು ಪುಟಗಳ ಎರಡು ಸಂಪುಟವಿದ್ದ ಪ್ರಿನ್ಸಿಪಲ್ ಆಫ್ ಸೈಕಾಲಜಿ ಅಮೆರಿಕೆ ಮತ್ತು ಯುರೋಪ್‌ಗಳಲ್ಲಿ ಪ್ರಸಿದ್ಧಿ ಗಳಿಸಿತ್ತು. ಎರಡು ವರ್ಷಗಳ ನಂತರ ಇದರ ಸಂಕ್ಷಿಪ್ತ ಆವೃತ್ತಿಯೂ ಹೊರಬಿದ್ದಿತು. ಈ ಕೃತಿಯಲ್ಲಿ ಜೇಮ್ಸ್ ಮಾನಸಿಕ ಮತ್ತು ಶಾರೀರಿಕ ವಿಜ್ಞಾನಗಳನ್ನು ಒಗ್ಗೂಡಿಸಿದ್ದ. ಆಲೋಚನೆ ಮತ್ತು ಜ್ಞಾನ ಉಳಿವಿಗೆ ಸಾಧನಗಳು ಎಂದು ತಿಳಿಸಿದ್ದ. ಮಾನಸಿಕ ಘಟನೆಗಳನ್ನು ಅಂತರವಲೋಕನದಿಂದ ಬಿಡಿಬಿಡಿಯಾಗಿ ನೋಡುವುದನ್ನು ವಿರೋಧಿಸಿ ವರ್ತನೆಯ ಮೇಲೆ ಪರಿಸರದ ಪ್ರಭಾವವನ್ನು ಸೇರಿಸಿ ಇಡಿಯಾಗಿ ಅಧ್ಯಯನ ಮಾಡಬೇಕು ಎನ್ನುವುದು ಇವನ ವಾದ. ಇವನ ಕ್ರಿಯಾತ್ಮಕ ವಾದ ಆರಂಭಿಕ ಪಂಥಗಳಲ್ಲಿ ಪ್ರಮುಖವಾದದ್ದು. ಕಾರ್ಲ ಲಾಂಗ್‌ನ ವಿಚಾರವನ್ನು ಹೋಲುವ ಒಂದು ಘಟನೆ ದೈಹಿಕ ಪ್ರಕ್ರಿಯೆಗಳನ್ನು ಪ್ರಚೋದಿಸಿದಾಗ ಅದನ್ನು ಅರ್ಥೈಸುವುದರಿಂದ ಸಂವೇಗಗಳು ಉಂಟಾಗುತ್ತವೆ ಎಂಬ ಸಿದ್ಧಾಂತ ಮುಂದಿಟ್ಟಿದ್ದ. ಇವನ ಫಲಪ್ರಮಾಣಿತ ವಾದದ ಪ್ರಕಾರ ಒಂದು ಆಲೋಚನೆಯ ಸತ್ಯತೆಯನ್ನು

ಎಂದೂ ಪ್ರಮಾಣಿಸಲು ಸಾಧ್ಯವಿಲ್ಲ. ಆದುದರಿಂದ ಒಂದು ವಿಚಾರದ ಉಪಯುಕ್ತತೆಯ ಮೇಲೆ ಕೇಂದ್ರೀಕರಿಸಬೇಕು. ಇವನ ಪ್ರಕಾರ ಪ್ರತಿ ಸಂವೇದನೆಗೂ ಮಿದುಳಿನಲ್ಲಿ ಒಂದು ನರಕೇಂದ್ರ ಇರುತ್ತದೆ. ಆಲೋಚನೆ ಒಂದು ಚೇತನದ ಧಾರೆಯಂತಿದ್ದು ಒಂದೇರೀತಿಯ ಯೋಚನೆಯನ್ನು ಎರಡು ಬಾರಿ ಅನುಭವಿಸಲು ಸಾಧ್ಯವಿಲ್ಲ. ಸ್ವತಂತ್ರವಾದ ಇಚ್ಛಾಶಕ್ತಿ (will) ಇದೆಯೇ ಎನ್ನುವುದರ ಬಗ್ಗೆ ಬಹಳ ಆಲೋಚಿಸಿದ್ದವನು ಇವನು. ಕಷ್ಟಕರವಾದ ವಿಷಯವನ್ನು ಅವಧಾನದಿಂದ ಹಿಡಿದಿಟ್ಟುಕೊಳ್ಳುವುದು ಇದಕ್ಕೆ ಅಗತ್ಯ ಎಂದಿದ್ದ. ಮನೋಭೌತಿಕ ವಿಧಾನಗಳಿಂದ ಭ್ರಮೆಗಳ ಮೇಲೆ ಪ್ರಯೋಗ ನಡೆಸಿ ಅವಕ್ಕೆ ಶಾರೀರಿಕ ವಿವರಣೆ ನೀಡಿದ್ದ.

ಕ್ರಮೇಣ ಜೇಮ್ಸನಿಗೆ ಆಸಕ್ತಿ ಮನೋವಿಜ್ಞಾನದಲ್ಲಿ ಕಡಿಮೆಯಾಗಿ ತತ್ವಶಾಸ್ತ್ರದೆಡೆಗೆ ಹೊರಳಿತು. ಅಮೆರಿಕೆಯ ಪ್ರಥಮ ಮನೋಪ್ರಯೋಗಶಾಲೆ ಸ್ಥಾಪಿಸಿದವನಿಗೆ ಅದರಲ್ಲಿ ಕೆಲಸಮಾಡುವುದು ಅಹಿತವಾಗಿತ್ತು. ದರ್ಶನಶಾಸ್ತ್ರದ ಸಮಸ್ಯೆಗಳ ಮುಂದೆ ಮನೋವಿಜ್ಞಾನ ಕ್ಷುಲ್ಲಕ ಎನಿಸಿತ್ತಂತೆ. ಹೀಗಾಗಿ ದೇವರ ಆಸ್ತಿತ್ವ, ಆತ್ಮದ ಅಮರತ್ವ, ಸ್ವ - ಇಚ್ಛಾಶಕ್ತಿ ಮುಂತಾದವುಗಳಿಗೆ ಗಮನ ನೀಡಿದ್ದ. ಅತಿಮಾನುಷ ಕ್ರಿಯೆಗಳ ಸಂಶೋಧನೆಗೆ ಸಹಾಯ ಮಾಡಿದ್ದ. ಇಂತಹ ವಿಚಾರಗಳಿಗೆ ದೃಢವಾದ ಪುರಾವೆ ಇಲ್ಲ ಎಂದು ಒಪ್ಪಿದರೂ, ಧಾರ್ಮಿಕ ಅನುಭವಗಳ ದಾಖಲೆಗಳ ಆಧಾರದ ಮೇಲೆ 'ದೈವಿಕ' ಎಂಬುದರ ಅಸ್ತಿತ್ವ ಪ್ರತಿಪಾದಿಸಿದ್ದ. ವಿವಿಧ ರೀತಿಯ ಧಾರ್ಮಿಕ ಅನುಭವಗಳಿರುವುದು ಅನೇಕ ಹಾಗೂ ನಿರ್ದಿಷ್ಟವಾದ ಚೇತನದಂತಹ ಶಕ್ತಿಗಳ ಸಂಗ್ರಹವೇ ಇದ್ದು ಅದನ್ನು ವಿಷಮ ಸನ್ನಿವೇಶಗಳಲ್ಲಿ ಜನರು ಸಂಪರ್ಕಿಸಬಲ್ಲರು ಎನ್ನುವ ಅವನ ವಾದ ಅನೇಕರ ಮನ ಮುಟ್ಟಿತ್ತು. ಈಗ ಜೇಮ್ಸ್ ದಾರ್ಶನಿಕ ಎಂದು ಹೆಸರುವಾಸಿಯಾದ.

1901-02 ರಲ್ಲಿ ಎಡಿನ್‌ಬರೋ ವಿಶ್ವವಿದ್ಯಾಲಯದಲ್ಲಿ ಧಾರ್ಮಿಕ ವಿಷಯಗಳ ಬಗ್ಗೆ ಗಿಫ್ಫರ್ಡ್ ಉಪನ್ಯಾಸಮಾಲೆಗೆ ಆಹ್ವಾನ ಬಂದಿತ್ತು. ಇವನ ಈ ಉಪನ್ಯಾಸಗಳು 'ವೆರೈಟೀಸ್ ಆಫ್ ರಿಲಿಜಿಯಸ್ ಎಕ್ಸಪಿರೀಯನ್ಸ್ (Varieties of religious experience)' ಎಂದು ಪ್ರಕಾಶಿತವಾಯಿತು. 'ಧಾರ್ಮಿಕ ಮನೋವಿಜ್ಞಾನ' ಎಂಬ ಒಂದು ಚಿಂತನಾ ವೈಖರಿಯೇ ಪ್ರಾರಂಭವಾಯಿತು. ಇವನು ಆಂಗ್ಲಭಾಷೆಯನ್ನಾಡುವ ದೇಶಗಳಲ್ಲಿ ತತ್ವಶಾಸ್ತಕ್ಕೆ ಹೊಸ ಜೀವದ ಕೇಂದ್ರವಾದ. ಕೊಲಂಬಿಯಾ ವಿಶ್ವವಿದ್ಯಾಲಯದಲ್ಲಿ ಪ್ರಾಗ್ಮಾಟಿಸಂನ ಬಗ್ಗೆ ಉಪನ್ಯಾಸ ನೀಡಲು 1907 ರಲ್ಲಿ ಹೋದಾಗ ವಿದ್ವತ್ ಪ್ರಪಂಚ ಅವನನ್ನು ಹೊಸ ಪ್ರವಾದಿಯಂತೆ ಸ್ವಾಗತಿಸಿತು. ಸಭಾಭವನದ ಒಳಗೂ ಹೊರಗೂ ಜನ ನಿಂತು ಅವನ ಭಾಷಣಗಳನ್ನು ಆಲಿಸಿದ್ದರು. ಮ್ಯಾಂಚೆಸ್ಟರ್ ನಲ್ಲಿ 1909 ರಲ್ಲಿ ನೀಡಿದ ಉಪನ್ಯಾಸಗಳೊಡನೆ ಸೇರಿ ಇದು 'ದಿ ಪ್ಲುರಲಿಸ್ಟಿಕ್ ಯೂನಿವರ್ಸ್ (The Pluralistic Universe)' ಎಂಬ ಕೃತಿಯಾಗಿ ಹೊರಬಂತು. ಇವನು ಆಲಿಸ್ ಗಿಬ್ಬನ್ಸ್ ರನ್ನು 1878 ರಲ್ಲಿ ವಿವಾಹವಾದನು,ಇವರಿಗೆ ಐವರು ಮಕ್ಕಳಿದ್ದರು. 1910 ರಲ್ಲಿ ನ್ಯೂಹಾಂಪ್‌ಶೈರ್‌ನಲ್ಲಿ ಮರಣಿಸುವವರೆಗೂ, ಜೇಮ್ಸ್ ತನ್ನ ಜೀವನವೆಲ್ಲಾ, ಬರೆಯುತ್ತಲೇ ಇದ್ದ. ಇವನ ಬರಹಗಳ ಪಟ್ಟಿಯೇ 47 ಪುಟವನ್ನು ಮೀರಿದೆಯಂತೆ !

***